C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ ನಂ.115/2021

ದಿನಾಂಕಃ 05.10.2023 ರಂದು ಪ್ರಮಾಣ ವಚನ ಬೋಧಿಸಲಾಗಿದೆ

ಸಿ. ಡಬ್ಲ್ಯು : 22 ಪಿ. ಡಬ್ಲ್ಯು : 14

| | |
|---|---|
| ಸಾಕ್ಷಿದಾರರ ಹೆಸರು | ಚೇತನ್ ಕುಮಾರ್ |
| ತಂದೆಯ ಹೆಸರು | ರಮೇಶ್ |
| ವಯಸ್ಸು | 32 ವರ್ಷ |
| ಉದ್ಯೋಗ | ಪೊಲೀಸ್ ಕಾನ್ಸ್ಟೇಬಲ್ ಕೆರೆಗೋಡು ಠಾಣೆ. |
| ವಾಸ | ಕೆರಗೋಡು |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ನಾನು ಮಾರ್ಚ್ 2018 ರಿಂದ ನವೆಂಬರ್ 2021 ರವರೆಗೆ ನಾಗಮಂಗಲ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 20.08.2020 ರಂದು ಚಾಸಾ 26 ಪಿಎಸ್ಐ ರವರು, ಬಿಳಿ ಬಟ್ಟೆಯಲ್ಲಿ ಸೀಲ್ ಆಗಿದ್ದ ಒಂದು ಕುಡಗೋಲನ್ನು ಮತ್ತು ಒಂದು ಗಾಯದ ಪ್ರಮಾಣ ಪತ್ರವನ್ನು ನನಗೆ ನೀಡಿ ಇವುಗಳನ್ನು ವೈದ್ಯರ ಬಳಿ ತೆಗೆದುಕೊಂಡು ಹೋಗಿ ಸದರಿ ಕುಡಗೋಲಿನಿಂದ ಹಲ್ಲೆ ಮಾಡಿದರೆ ಗಾಯದ ಪ್ರಮಾಣ ಪತ್ರದಲ್ಲಿ ಹೇಳಿರುವ ಗಾಯಗಳು ಆಗುತ್ತದೆಯಾ ಎಂಬ ಅಭಿಪ್ರಾಯವನ್ನು ವೈದ್ಯರಿಂದ ಪಡೆದುಕೊಂಡು ಬರುವಂತೆ ಹೇಳಿ ನನಗೆ ಒಂದು ಮನವಿ ಪತ್ರವನ್ನು ವೈದರಿಗೆ ಕೊಡುವಂತೆ ಹೇಳಿ ಕೊಟ್ಟಿದ್ದರು. ಅದರಂತೆ ನಾನು ಮನವಿ ಪತ್ರದೊಂದಿಗೆ ಬಿಳಿ ಬಟ್ಟೆಯಲ್ಲಿ ಸೀಲ್ ಆಗಿದ್ದ ಒಂದು ಕುಡಗೋಲನ್ನು ಮತ್ತು ಒಂದು ಗಾಯದ ಪ್ರಮಾಣ ಪತ್ರವನ್ನು ತೆಗೆದುಕೊಂಡು ಬೆಳ್ಳೂರು ಕ್ರಾಸ್ ಹತ್ತಿರ ಇರುವ ಆದಿ ಚುಂಚನಗಿರಿ ಆಸ್ಪತ್ರೆಗೆ ಹೋಗಿ ಅಲ್ಲಿ ಚಾಸಾ 15 ವೈದ್ಯರಿಗೆ ನೀಡಿದೆನು. ಚಾಸಾ 15 ವೈದ್ಯರು ಇವುಗಳನ್ನು ಪರಿಶೀಲನೆ ಮಾಡಿ, ಅವರ ಅಭಿಪ್ರಾಯನ್ನು ಒಂದು ಪತ್ರದಲ್ಲಿ ಸೂಚಿಸಿ ಅದನ್ನು ನನಗೆ ನೀಡಿದರು. ಸದರಿ ವೈದ್ಯರ ಅಭಿಪ್ರಾಯ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.17 ಎಂದು ಗುರುತಿಸಲಾಗಿದೆ. ಇದರಲ್ಲಿ ಇರುವ ನನ್ನ ರಜುವನ್ನು ನಿಪಿ.17(ಬಿ)ಎಂದು ಗುರುತಿಸಲಾಯಿತು. ನಾನು ಮೇಲೆ ಹೇಳಿದ ಕುಡುಗೋಲನ್ನು

ಈಗ ನ್ಯಾಯಾಲಯದ ಮುಂದೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ 3 ಕುಡಗೋಲನ್ನು ನೋಡಿ ಗುರುತಿಸಿದ್ದಾರೆ. ಮುಮಾ 3 ನ್ನು, ಒಂದು ಕೋಲಿಗೆ ಕಟ್ಟಿಕೊಂಡರೆ ಅದನ್ನು ಹಳ್ಳಿ ಕಡೆ ಜವಳಿ ಕುಡಗೋಲು ಎಂದು ಕರೆಯುತ್ತಾರೆ ಹಾಗೂ ಅದನ್ನು ಮಾಮೂಲಿಯಾಗಿ ಕುಡುಗೋಲು ಎಂದು ಸಹ ಕರೆಯುತ್ತಾರೆ.

<u>ಪಾಟೀ ಸವಾಲು ಃ ಆರೋಪಿತನ ಪರ ಶ್ರೀ ಎನ್.ಎನ್ ವಕೀಲರಿಂದ ಃ</u>

ನಿಪಿ.16 ಕೋರಿಕೆ ಪತ್ರ ದಾಖಲೆಯಲ್ಲಿ ನನ್ನ ಹೆಸರು ಮತ್ತು ಸಿಪಿಸಿ ಸಂಖ್ಯೆ ನಮೂದು ಆಗಿಲ್ಲ ಎಂದರೆ ಸರಿ. ಸದರಿ ಕೋರಿಕೆ ಪತ್ರದಲ್ಲಿ, ಕೊನೆಯ ಸಾಲಿನಲ್ಲಿ ಸಿಪಿಸಿ - ಎಂದು ಇದೆ ಎಂದರೆ ಸರಿ ಮತ್ತು ಈ ಜಾಗವನ್ನು ಖಾಲಿ ಬಿಟ್ಟಿದ್ದಾರೆ ಎಂದರೆ ಸರಿ. ಸದರಿ ಭಾಗವನ್ನು ನಿಡಿ.5 ಎಂದು ಗುರುತಿಸಲಾಯಿತು. ಆರೋಪಿಯು, ಮುಮಾ 3 ಕುಡಗೋಲಿನಿಂದಲೇ ಗಾಯಾಳುವಿಗೆ ಹಲ್ಲೆ ಮಾಡಿದ್ದನೋ, ಇಲ್ಲವೋ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಯಾವುದೇ ಮನವಿ ಪತ್ರವನ್ನಾಗಲೀ ಅಥವಾ ಗಾಯದ ಪ್ರಮಾಣ ಪತ್ರವನ್ನಾಗಲೀ ಅಥವಾ ಮು ಮಾ 3 ಕುಡಗೋಲನ್ನು ಚಾಸಾ 15 ವೈದ್ಯರ ಬಳಿ ಅವರ ಅಭಿಪ್ರಾಯಕ್ಕೆ ತೆಗೆದುಕೊಂಡು ಹೋಗಿ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಆದಕಾರಣ ನಿಪಿ.16 ಕೋರಿಕೆ ಪತ್ರದಲ್ಲಿ ಸಿಪಿಸಿ ಸಂಖ್ಯೆ ನಮೂದು ಆಗಿಲ್ಲ ಎಂದರೆ ಸರಿಯಲ್ಲ. ನಿಪಿ.17 ದಾಖಲೆಯನ್ನು, ನಾನು ಮತ್ತು ಚಾಸಾ 15 ವೈದ್ಯರು ಸೇರಿ ಕೇಸಿಗಾಗಿ ಸುಳ್ಳಾಗಿ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಭಿಪ್ರಾಯವನ್ನು ನಾನು ಮತ್ತು ನಮ್ಮ ಠಾಣಾ ಅಧಿಕಾರಿಗಳು ಸೇರಿಕೊಂಡು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಕುಡಗೋಲು ಎಂದರೆ ಬೇರೆ ಮತ್ತು ಜವಳಿ ಕುಡಗೋಲು ಬೇರೆ ಎಂದು ಹೇಳುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಏನೂ ಇಲ್ಲ.
(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.